**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ., ನ್ಯಾಯಾಲಯ ಅಥಣಿ**

**ಓ.ಎಸ್.ನಂ. 588/2020** **ದಿನಾಂಕಃ 13.10.2025**

**ಪಿ.ಡಬ್ಲೂಃ 1**

---

**13.10.2025: ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

*********

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ ಎಲ್ ಕೆ ವಕೀಲರಿಂದಃ

ನಾವು ಈ ದಾವೆಯನ್ನು ಎರಡು ಆಸ್ತಿಗಳ ಕುರಿತಾಗಿ ಮಾಡಿರುತ್ತೇವೆ. ದಾವಾ ಆಸ್ತಿ ಸರ್ವೆ ನಂ. 436, 3 1/2 ಎಕರೆ ಇದ್ದು. ಇನ್ನೊಂದು ದಾವಾ ಆಸ್ತಿ ಸರ್ವೆ ನಂ. 924, 4 1/2 ಎಕರೆ ಇದ್ದು. ಈ ಎರಡು ಕುರಿತಾಗಿ ದಾವೆ ಮಾಡಿರುತ್ತೇನೆ ಮತ್ತು ನನ್ನ ಗಂಡ ಬಸಪ್ಪನ ಹೆಸರಿನಲ್ಲಿ ಇರುವ ಇನ್ನೊಂದು ಆಸ್ತಿಯ ಕುರಿತಾಗಿ ದಾವೆ ಮಾಡಿರುತ್ತೇನೆ. ಪ್ರತಿವಾದಿಯು ನನಗೆ ಹೇಳದೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದು ಅದರಿಂದ ನನಗೆ ಮೋಸವಾಗಿರುತ್ತದೆ, ಆಕಾರಣಕ್ಕಾಗಿ ದಾವೆ ಮಾಡಿರುತ್ತೇನೆ. ಆಸ್ತಿಯ ಸಲುವಾಗಿ ನನ್ನ ಗಂಡ ನನಗೆ ಮೋಸ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ವಿಷಯದಲ್ಲಿ ನನ್ನ ಗಂಡ ಕುಡಿದ ಮತ್ತಿನಲ್ಲಿ ಏನು ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಿನ ನನ್ನ ಗಂಡ ನನ್ನೊಂದಿಗೆ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ನಾನು ನನ್ನ ಗಂಡನೊಂದಿಗೆ ನ್ಯಾಯಾಲಯಕ್ಕೆ ಈ ದಿನ ಬಂದಿದ್ದು ನನ್ನ ಗಂಡ ತನ್ನ ವೈಯಕ್ತಿಕ ಕೆಲಸಕ್ಕೆ ಬಂದಿರುತ್ತಾನೆ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿ ನನ್ನ ಗಂಡನಿಗೆ ಅವನ ತಂದೆಯಿಂದ ಬಂದಿರುತ್ತದೆ. ಕಲ್ಲಪ್ಪನಿಂದ ನನ್ನ ಗಂಡನಿಗೆ ದಾವಾ ಆಸ್ತಿಯು ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಸಲ ದಾವಾ ನಂ.1080/2021 ಈ ದಾವೆಯನ್ನು ನನ್ನ ಗಂಡ ಇದೇ ನ್ಯಾಯಾಲಯದಲ್ಲಿ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಶಾಲೆ ಕಲಿಯದೆ ಇರುವುದರಿಂದ ನಮ್ಮ ವಕೀಲರ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಮ್ಮ ಪರ ವಕೀಲರು ಅಸಲ ದಾವಾ ನಂ.1080/2021 ದಾವೆಯಲ್ಲಿಯು ಸಹ ಅವರೆ ನನ್ನ ಗಂಡನ ಪರ ವಕೀಲರು ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈರವ್ವ ಗುರುನಾಥ ಬಡಿಗೇರ, ಸುನಂದಾ ರಾಜು ಬಡಿಗೇರ, ಶಾರದಾ ರುದ್ರೇಶ ಬಡಿಗೇರ, ಶಾಂತಾ ಚಿದಾನಂದ ಬಡಿಗೇರ ಇವರೆಲ್ಲ ನನ್ನ ಗಂಡನ ಅಕ್ಕ ತಂಗಿಯರು ಇರುತ್ತಾರೆ. ಅವರೆಲ್ಲ ಯಾವ ಊರಿನಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ನ್ಯಾಯಾಲಯದಲ್ಲಿ ನನ್ನ ಗಂಡನ ಅಕ್ಕತಂಗಿಯರು ಅಸಲ ದಾವಾ ನಂ.1404/2008 ಅಂತಾ ದಾವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಅಕ್ಕತಂಗಿಯರು ನನ್ನ ಗಂಡನ ಮೇಲೆ ಮತ್ತು ನನ್ನ ಮಾವನಾದ ಕಲ್ಲಪ್ಪ, ನನ್ನ ಮೈದನರಾದ ಮೌನೇಶ್ವರ ಮತ್ತು ಕೃಷ್ಣಾ, ನನ್ನ ಅತ್ತೆಯಾದ ತುಳಸಾಬಾಯಿ ಇವರ ಮೇಲೆ ದಾವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ಎರಡು ಮತ್ತು

ಮೂರನೇ ಪ್ರತಿವಾದಿಯರು ಸಹ ಪಕ್ಷಗಾರರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 29-01-2009 ರಂದು ಆ ದಾವೆಯು ರಾಜಿಯಲ್ಲಿ ಕೊನೆಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಸಲ ದಾವಾ ನಂ.1404/2008 ರ ಸಮಯದಲ್ಲಿ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯು ಹೇಗೆ ರಾಜಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆ 2 ಮತ್ತು 3ನೇ ಪ್ರತಿವಾದಿಯರು ಖರೀದಿ ಮಾಡಿದ್ದರಿಂದ ಅವರೇ ಮಾಲಿಕರಾಗಿದ್ದಾರೆ ಎಂಬ ಆಧಾರದ ಮೇಲೆ ಆದಾವೆಯು ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರದ ಪ್ರಕಾರ 2 ಮತತು 3 ನೇ ಪ್ರತಿವಾದಿಯರು ಮಾಲೀಕರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಸರಾಯಿ ಕುಡಿಯು ಅಭ್ಯಾಸ ಇರುವುದರಿಂದ ಅವನು ನನಗೆ ಮೊಸ ಮಾಡಿದ್ದಾನೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಾನೆ ಎಂದರೆ ಸರಿಯಲ್ಲ. ನನ್ನ ಗಂಡನೆ ನನ್ನ ಕೈಯಿಂದ ದಾವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿಯು ಸರಾಯಿ ಕುಡಿಯುವ ಅಭ್ಯಾಸ ಇಲ್ಲ ಎಂದರೆ ಸರಿಯಲ್ಲ. ದಾವೆ ದಾಖಲಿಸಲು ನನ್ನ ಸೋದರ ಮಾನವಾದ ನಿಂಗಪ್ಪ ಬಡಿಗೇರ ಮಾಹಿತಿಯನ್ನು ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. 2 ಮತ್ತು 3 ನೇ ಪ್ರತಿವಾದಿಯರಿಂದ ಇನ್ನಷ್ಟು ಹಣ ವಸೂಲಿ ಮಾಡುವ ಸಲುವಾಗಿ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸುಳ್ಳು ಅಂಶಗಳಿಂದ ಕೂಡಿದ್ದು ಅದನ್ನು ಆಧರಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಇದೆ.

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್.ಸಿ., ನ್ಯಾಯಾಲಯ ಅಥಣಿ.